## Dictionary ಸ್ಕೂಲ್!

ಮೊನ್ನೆ ನನ್ನ ಮೊಮ್ಮಗ ಹರಿ ಶಾಲೆಯಿಂದ ಬಂದವನೇ 'ಇವತ್ತು ನಮ್ಮ ಕ್ಲಾಸಿಗೆ ಒಂದು ಹೊಸ ಅಡ್ಮಿಷನ್, ನನಗೂ ಫ್ರೆಂಡ್ ಆದ' ಎಂದು ವರದಿ ಶುರು ಮಾಡಿದ.

'ಹೌದಾ. ಯಾವ ಶಾಲೆಯಿಂದ ಬಂದಿರೋದು?' ಎಂದು ಕುತೂಹಲದಿಂದ ಕೇಳಿದೆ. Dictionary ಸ್ಕೂಲ್ ಎಂದಾಗ ಅರ್ಥವಾಗದೇ 'ಅದ್ಯಾವ ಸ್ಕೂಲು ಕೇಳಿದಂತಿಲ್ಲ, ಹೊಸತಾಗಿದೆ' ಎಂದು ಹುಬ್ಬೇರಿಸಿದೆ. ಅವನು ಪಕಪಕನೆ ನಗುತ್ತ 'oxford ಸ್ಕೂಲ್' ಎನ್ನಬೇಕೆ ?

ಮನೆಯಲ್ಲಿದ್ದ oxford dictionaryಯಿಂದ ಪ್ರೇರಿತನಾಗಿ ಈ ಜಾಣ್ಮೆ ತೋರಿದ್ದು ನನ್ನ ಪೆದ್ದು ತಲೆಗೆ ಹೊಳೆಯದೆ ಪೆಚ್ಚಾದೆ!

**ಕೆ.ವಿ. ರಾಜಲಕ್ಷ್ಮಿ**





ಕಲೆ: ಗಣೇಶ ಆಚಾರ್ಯ

## ಮೇಕಪ್ ಎಫೆಕ್ಟ್

ಎಂಟು ತಿಂಗಳ ನನ್ನ ಮೊಮ್ಮಗ ಅಗಸ್ತ್ಯನಿಗೆ ಲಾಲಿ ಪದ ಹಾಡಿ ಜೋಲಿಯಲ್ಲಿ ಮಲಗಿಸುವುದು, ಆಡಿಸುವುದು ನನ್ನ ಇತ್ತೀಚಿನ ದಿನಚರಿ ಆಗಿದೆ.

ಮನೆಯಲ್ಲಿ ಒಂದು ನೈಟಿ ತಗಲಾಕಿಕೊಂಡು ಇರುತ್ತಿದ್ದ ನಾನು ಆ ದಿನ ಯಾವುದೋ ಕಾರ್ಯಕ್ರಮಕ್ಕೆ ಹೋಗಲು ಸೀರೆ ಮತ್ತು ಅಲ್ಪ ಮೇಕಪ್‌ನೊಂದಿಗೆ ತಯಾರಾಗಿ, ಮೊಮ್ಮಗ ಅಗಸ್ತ್ಯನನ್ನು ಎತ್ತಿಕೊಂಡು ಮುದ್ದು ಮಾಡಲು ಹೋದರೆ ನನ್ನ ಗುರುತು ಭಿನ್ನ ಎನಿಸಿ ಯಾರೋ ಅಪರಿಚಿತರು ಎತ್ತಿಕೊಂಡಿದ್ದಾರೆ ಎಂದು ನನ್ನ ಮುಖ ನೋಡಿ ನೋಡಿ ಜೋರಾಗಿ ಅಳಲು ಶುರು ಮಾಡಿದ! ಇದರಿಂದ ಬೇಸ್ತು ಬೀಳುವ ಸರದಿ ಮಗ, ಸೊಸೆ ಹಾಗೂ ನನ್ನದಾಗಿತ್ತು.

**ಟಿ.ಎಸ್. ಪ್ರತಿಭಾ**